# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

## ಸಿ.ಸಿ.ನಂ.50/2025

1) ಕರ್ನಾಟಕ ಸರ್ಕಾರ
ಸಾವಳಗಿ ಪೋಲೀಸ್ ಠಾಣೆ

....ಫಿರ್ಯಾದಿ

ವಿರುದ್ಧ

ಎ-1) ಧರೆಪ್ಪ ತಂದೆ ಹಬುಲಿ ಗುಗ್ಗರಿ,
ವಯಸ್ಸುಃ-36 ವರ್ಷ, ಉದ್ಯೋಗಃ-ಒಕ್ಕಲುತನ,
ಸಾಃ ಅಡಿಹುಡಿ, ತಾಃ ಜಮಖಂಡಿ, ಜಿಃ ಬಾಗಲಕೋಟೆ.

ಎ-2) ಸದಾಶಿವ ತಂದೆ ಹಬುಲಿ ಗುಗ್ಗರಿ,
ವಯಸ್ಸುಃ 42 ವರ್ಷ, ಉದ್ಯೋಗಃ-ಒಕ್ಕಲುತನ,
ಸಾಃ ಅಡಿಹುಡಿ, ತಾಃ ಜಮಖಂಡಿ, ಜಿಃ ಬಾಗಲಕೋಟೆ.

ಎ-5) ಶಾಂತಾಬಾಯಿ ಸದಾಶಿವ ಗುಗ್ಗರಿ,
ವಯಸ್ಸುಃ 32 ವರ್ಷ, ಉದ್ಯೋಗಃ-ಮನೆಗೆಲಸ,
ಸಾಃ ಅಡಿಹುಡಿ, ತಾಃ ಜಮಖಂಡಿ, ಜಿಃ ಬಾಗಲಕೋಟೆ.

ಎ-6) ಸಂಗೀತಾ ಧರೆಪ್ಪ ಗುಗ್ಗರಿ,
ವಯಸ್ಸುಃ 30 ವರ್ಷ, ಉದ್ಯೋಗಃ-ಮನೆಗೆಲಸ,
ಸಾಃ ಅಡಿಹುಡಿ, ತಾಃ ಜಮಖಂಡಿ, ಜಿಃ ಬಾಗಲಕೋಟೆ.

(ಆರೋಪಿತರ ಕ್ರಮ ಸಂಖ್ಯೆಗಳು ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿದ ಪ್ರಕಾರ ಇರುತ್ತವೆ)

....ಆರೋಪಿತರು

## :: ದೋಷಾರೋಪಣೆ::

ನಾನು ಶ್ರೀ.ರಾಜಶೇಖರ ಎಸ್. ಹರಸೂರ, ಬಿ.ಎ. ಎಲ್.ಎಲ್.ಬಿ. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜಮಖಂಡಿ, ಈ ಮೇಲೆ ನಮೂದಿಸಿದ ಆರೋಪಿತರಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ ಎಂದು ತಿಳಿಸುತ್ತಿದ್ದೇನೆಃ

1) ದಿನಾಂಕ 18.05.2024 ರಂದು ಸಂಜೆ 18.00 ಗಂಟೆಗೆ ಅಡಿಹುಡಿ ಗ್ರಾಮದ ಜಮೀನು ಸರ್ವೆ ನಂ.68/05 ಜಮೀನಿನಲ್ಲಿ, ಚಾಸಾ-1 ಮಹಾದೇವ ಗುಗ್ಗರಿ ಇವರು 1 ನೇ ಆರೋಪಿಯಾದ ನಿಮಗೆ, ಸೀಮಿ ಕಲ್ಲಿನ ಮೇಲೆ ಹಾಕಿದ ಗರಸು ತೆಗೆದುಕೊಂಡು ನಿಮ್ಮ ಹೊಲದಲ್ಲಿ ಹಾಕಿಕೊಳ್ಳಿರಿ, ನಮಗೆ ತಿರುಗಾಡಲು

ತೊಂದರೆ ಆಗುತ್ತದೆ ಎಂದು ಹೇಳಿದಾಗ, ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೋದ್ದೇಶದಿಂದ ಚಾಸಾ-1 ರವರ ಜಮೀನಿನಲ್ಲಿ ಅಕ್ರಮ ಪ್ರವೇಶ ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.447 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

2) ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಕೈ ಮುಷ್ಠಿ ಮಾಡಿ ಜಗಳ ಬಿಡಿಸಲು ಬಂದ ಚಾಸಾ-4 ಸವಿತಾ ಚೌರಿ ಮತ್ತು ಚಾಸಾ-5 ಮೀನಾಕ್ಷಿ ಗುಗ್ಗರಿ ಇವರ ಹೊಟ್ಟೆಗೆ ಮತ್ತು ಬೆನ್ನಿಗೆ ಗುದ್ದಿ ಹೊಡೆಬಡೆ ಮಾಡಿ ಒಳಪೆಟ್ಟುಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

3) ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2, 5 ಮತ್ತು 6 ನೇ ಆರೋಪಿತರು ಬಿದಿರಿನ ಬಡಿಗೆ ಹಾಗೂ ಕಲ್ಲಿನಿಂದ ಚಾಸಾ-1 ರವರ ಬೆನ್ನಿಗೆ ಹೊಡೆದಿದ್ದು ಮತ್ತು 1 ನೇ ಆರೋಪಿಯು ಹಲ್ಲಿನಿಂದ ಚಾಸಾ-1 ರವರ ಬೆನ್ನಿಗೆ ಕಚ್ಚಿ ಗಾಯಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

4) ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು ಕೂಡಿ ಜಗಳ ಬಿಡಿಸಲು ಬಂದ ಚಾಸಾ-4 ಮತ್ತು 5 ರವರ ಮೈ ಕೈ ಹಿಡಿದು, ಅವರ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.354(ಬಿ) ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

5) ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಚಾಸಾ-1, 4 ಮತ್ತು 5 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

6) ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-1, 4 ಮತ್ತು 5 ರವರಿಗೆ ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ

ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

ಈ ಮೇಲೆ ವಿವರಿಸಿದ ಎಲ್ಲಾ ಆರೋಪಗಳು ಈ ನ್ಯಾಯಾಲಯದ ಸಂಜ್ಞೇಯತೆಗೆ ಒಳಪಟ್ಟಿರುತ್ತದೆ. ಆರೋಪವನ್ನು ರಚಿಸಿ, ಆರೋಪಿತರಿಗೆ ಓದಿ, ತಿಳಿಸಿ ಹೇಳಿ ಅರ್ಥಪಡಿಸಿದ ನಂತರ ಅವರ ಹೇಳಿಕೆಗಳನ್ನು ಈ ದೋಷಾರೋಪಣೆಯೊಂದಿಗೆ ಲಗತ್ತಿಸಿದ ಹಾಳೆಯಲ್ಲಿ ಬರೆದುಕೊಳ್ಳಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR Digitally signed by RAJASHEKHAR Date: 2025.12.04 18:11:13 +0530

ಸ್ಥಳಃ- ಜಮಖಂಡಿ
ದಿನಾಂಕಃ- 04.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ.

## ಸಿ.ಸಿ.ನಂ.**50/2025**

1) ಕರ್ನಾಟಕ ಸರ್ಕಾರ
ಸಾವಳಗಿ ಪೋಲೀಸ ಠಾಣೆ.

**....**ಫಿರ್ಯಾದಿ

ವಿರುದ್ಧ

ಎ-1) ಧರೆಪ್ಪ ತಂದೆ ಹಬುಲಿ ಗುಗ್ಗರಿ,
ವಯಸ್ಸುಃ-36 ವರ್ಷ, ಉದ್ಯೋಗಃ-ಒಕ್ಕಲುತನ,
ಸಾಃ ಅಡಿಹುಡಿ, ತಾಃ ಜಮಖಂಡಿ, ಜಿಃ ಬಾಗಲಕೋಟೆ.

**....**ಆರೋಪಿ

### ಃಃ ಆಪಾದನೆ ಃಃ

ಪ್ರಶ್ನೆ 1)ಃ- ಈ ಮೇಲೆ ತಮ್ಮ ವಿರುದ್ಧ ರಚಿಸಲಾದ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅರ್ಥವಾಗಿದೆಯೇ ?

ಉತ್ತರ ಃ- ತಿಳಿಯಿತು.

ಪ್ರಶ್ನೆಃ2) ಃ- ರಚಿಸಲಾದ ದೋಷರೋಪಣೆಯನ್ನು ಒಪ್ಪುವಿರೇ? ಅಥವಾ ವಿಚಾರಣೆಯಾಗ ಬಯಸುವಿರಾ ?

ಉತ್ತರ ಃ- ತಪ್ಪು ಮಾಡಿಲ್ಲ, ವಿಚಾರಣೆಯಾಗಲಿ.

ನನ್ನ ಸಮಕ್ಷಮ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಆತನ ಹೇಳಿಕೆಯನ್ನು ಯಥಾವತ್ತಾಗಿ ನಮೂದಿಸಿದೆ. ಸದರಿ ಹೇಳಿಕೆಯನ್ನು ಆರೋಪಿ ಹೇಳಿದ ರೀತಿಯಲ್ಲಿ ಇರುತ್ತದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR Digitally signed by RAJASHEKHAR Date: 2025.12.04 18:11:24 +0530

ಸ್ಥಳಃ- ಜಮಖಂಡಿ.
ದಿನಾಂಕಃ-04.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ.

## ಸಿ.ಸಿ.ನಂ.50/2025

1) ಕರ್ನಾಟಕ ಸರ್ಕಾರ
ಸಾವಳಗಿ ಪೋಲೀಸ ಠಾಣೆ.

....ಫಿರ್ಯಾದಿ

ವಿರುದ್ಧ

ಎ-2) ಸದಾಶಿವ ತಂದೆ ಹಬ್ಬುಲಿ ಗುಗ್ಗರಿ,
ವಯಸ್ಸುಃ 42 ವರ್ಷ, ಉದ್ಯೋಗಃ-ಒಕ್ಕಲುತನ,
ಸಾಃ ಅಡಿಹುಡಿ, ತಾಃ ಜಮಖಂಡಿ, ಜಿಃ ಬಾಗಲಕೋಟೆ.

....ಆರೋಪಿ

ಃಃ ಆಪಾದನೆ ಃಃ

ಪ್ರಶ್ನೆ 1)ಃ- ಈ ಮೇಲೆ ತಮ್ಮ ವಿರುದ್ಧ ರಚಿಸಲಾದ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅರ್ಥವಾಗಿದೆಯೇ ?

ಉತ್ತರ ಃ- ತಿಳಿಯಿತು.

ಪ್ರಶ್ನೆಃ2) ಃ- ರಚಿಸಲಾದ ದೋಷರೋಪಣೆಯನ್ನು ಒಪ್ಪುವಿರೇ? ಅಥವಾ ವಿಚಾರಣೆಯಾಗ ಬಯಸುವಿರಾ ?

ಉತ್ತರ ಃ- ತಪ್ಪು ಮಾಡಿಲ್ಲ, ವಿಚಾರಣೆಯಾಗಲಿ.

ನನ್ನ ಸಮಕ್ಷಮ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಆತನ ಹೇಳಿಕೆಯನ್ನು ಯಥಾವತ್ತಾಗಿ ನಮೂದಿಸಿದೆ. ಸದರಿ ಹೇಳಿಕೆಯನ್ನು ಆರೋಪಿ ಹೇಳಿದ ರೀತಿಯಲ್ಲಿ ಇರುತ್ತದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR Digitally signed by RAJASHEKHAR Date: 2025.12.04 18:11:31 +0530

ಸ್ಥಳಃ- ಜಮಖಂಡಿ.
ದಿನಾಂಕಃ-04.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ.

## ಸಿ.ಸಿ.ನಂ.**50/2025**

1) ಕರ್ನಾಟಕ ಸರ್ಕಾರ
ಸಾವಳಗಿ ಪೋಲೀಸ ಠಾಣೆ.

**....**ಫಿರ್ಯಾದಿ

ವಿರುದ್ಧ

ಎ-5) ಶಾಂತಾಬಾಯಿ ಸದಾಶಿವ ಗುಗ್ಗರಿ,
ವಯಸ್ಸುಃ 32 ವರ್ಷ, ಉದ್ಯೋಗಃ-ಮನೆಗೆಲಸ,
ಸಾಃ ಅಡಿಹುಡಿ, ತಾಃ ಜಮಖಂಡಿ, ಜಿಃ ಬಾಗಲಕೋಟೆ.

**....**ಆರೋಪಿ

**ಃಃ ಆಪಾದನೆ ಃಃ**

ಪ್ರಶ್ನೆ 1)ಃ- ಈ ಮೇಲೆ ತಮ್ಮ ವಿರುದ್ಧ ರಚಿಸಲಾದ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅರ್ಥವಾಗಿದೆಯೇ ?

ಉತ್ತರ ಃ- ತಿಳಿಯಿತು.

ಪ್ರಶ್ನೆಃ2) ಃ- ರಚಿಸಲಾದ ದೋಷರೋಪಣೆಯನ್ನು ಒಪ್ಪುವಿರೇ? ಅಥವಾ ವಿಚಾರಣೆಯಾಗ ಬಯಸುವಿರಾ ?

ಉತ್ತರ ಃ- ತಪ್ಪು ಮಾಡಿಲ್ಲ, ವಿಚಾರಣೆಯಾಗಲಿ.

ನನ್ನ ಸಮಕ್ಷಮ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಆತನ ಹೇಳಿಕೆಯನ್ನು ಯಥಾವತ್ತಾಗಿ ನಮೂದಿಸಿದೆ. ಸದರಿ ಹೇಳಿಕೆಯನ್ನು ಆರೋಪಿ ಹೇಳಿದ ರೀತಿಯಲ್ಲಿ ಇರುತ್ತದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR
Digitally signed by RAJASHEKHAR
Date: 2025.12.04 18:11:38 +0530

ಸ್ಥಳಃ- ಜಮಖಂಡಿ.
ದಿನಾಂಕಃ-04.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ.</u>

<u>ಸಿ.ಸಿ.ನಂ.**50/2025**</u>

1) ಕರ್ನಾಟಕ ಸರ್ಕಾರ
ಸಾವಳಗಿ ಪೋಲೀಸ ಠಾಣೆ.

**....**ಫಿರ್ಯಾದಿ

ವಿರುದ್ಧ

ಎ-6) ಸಂಗೀತಾ ಧರೆಪ್ಪ ಗುಗ್ಗರಿ,
ವಯಸ್ಸುಃ 30 ವರ್ಷ, ಉದ್ಯೋಗಃ-ಮನೆಗೆಲಸ,
ಸಾಃ ಅಡಿಹುಡಿ, ತಾಃ ಜಮಖಂಡಿ, ಜಿಃ ಬಾಗಲಕೋಟೆ.

**....**ಆರೋಪಿ

<u>ಃಃ ಆಪಾದನೆ ಃಃ</u>

ಪ್ರಶ್ನೆ 1)ಃ- ಈ ಮೇಲೆ ತಮ್ಮ ವಿರುದ್ಧ ರಚಿಸಲಾದ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅರ್ಥವಾಗಿದೆಯೇ ?

ಉತ್ತರ ಃ- ತಿಳಿಯಿತು.

ಪ್ರಶ್ನೆಃ2) ಃ- ರಚಿಸಲಾದ ದೋಷರೋಪಣೆಯನ್ನು ಒಪ್ಪುವಿರೇ? ಅಥವಾ ವಿಚಾರಣೆಯಾಗ ಬಯಸುವಿರಾ ?

ಉತ್ತರ ಃ- ತಪ್ಪು ಮಾಡಿಲ್ಲ, ವಿಚಾರಣೆಯಾಗಲಿ.

ನನ್ನ ಸಮಕ್ಷಮ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಆತನ ಹೇಳಿಕೆಯನ್ನು ಯಥಾವತ್ತಾಗಿ ನಮೂದಿಸಿದೆ. ಸದರಿ ಹೇಳಿಕೆಯನ್ನು ಆರೋಪಿ ಹೇಳಿದ ರೀತಿಯಲ್ಲಿ ಇರುತ್ತದೆ ಎಂದು ಈ ಮೂಲಕ ಧೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR
Digitally signed by RAJASHEKHAR
Date: 2025.12.04 18:11:45 +0530

ಸ್ಥಳಃ- ಜಮಖಂಡಿ.
ದಿನಾಂಕಃ-04.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.